## ತವಕ್ಕಲ್ ಕರ್ಮಾನ್

ಯೆಮನ್‌ನಲ್ಲಿ ಪ್ರಜಾಹಕ್ಕುಗಳ ಮತ್ತು ಮಾನವ ಹಕ್ಕುಗಳ ಉನ್ನತಿಗಾಗಿ ಹೋರಾಡುತ್ತಿರುವ ತವಕ್ಕಲ್ ಕರ್ಮಾನ್ ಎಂಬ ದಿಟ್ಟ ಮಹಿಳೆಗೆ ಈ ಸಲ ನೋಬೆಲ್ ಶಾಂತಿ ಪ್ರಶಸ್ತಿ ಲಭಿಸಿದೆ. ಒಂದೂವರೆ ದಶಲಕ್ಷ ಡಾಲರ್‌ನ ಈ ಬಹುಮಾನವನ್ನು ಈಕೆ, ಆಫ್ರಿಕಾದ 'ಉಕ್ಕಿನ ಮಹಿಳೆ' ಎಲೆನ್ ಜಾನ್ಸನ್ ಸಿರ್‌ಲೀಫ್ ಮತ್ತು ಲೇಮಾ ಬೋವೀ ಜತೆಗೆ ಹಂಚಿಕೊಂಡಿದ್ದಾರೆ. ಯೆಮೆನ್‌ನ ಅಧ್ಯಕ್ಷ ಅಲಿ ಅಬ್ದುಲ್ಲಾ ಸಾಲೆಹ್ ಸರ್ವಾಧಿಕಾರದ ವಿರುದ್ಧ ಜನಸಂಘಟನೆ ಮಾಡುತ್ತಾ ಹೋರಾಡುತ್ತಿರುವ ತವಕ್ಕಲ್ ಕರ್ಮಾನ್‌ಗೆ ಈ ಪ್ರಶಸ್ತಿ 'ಆನೆಬಲ' ತಂದುಕೊಟ್ಟಿದೆ.



ಈಜಿಪ್ಟ್‌ನಲ್ಲಿ ಪ್ರಜಾಹೋರಾಟಕ್ಕೆ ಸಿಕ್ಕ ಜಯದ ಬಳಿಕ ಈಗ ಎಲ್ಲರ ಕಣ್ಣು ಯೆಮನ್‌ನತ್ತ ನೆಟ್ಟಿದೆ. 'ಸಂಕೋಲೆ ಇಲ್ಲದ ಮಹಿಳಾ ಪತ್ರಕರ್ತರು' ಎಂಬ ತವಕ್ಕಲ್ ಕರ್ಮಾನ್ ಸ್ಥಾಪಿಸಿರುವ ಸಂಘಟನೆ 2005ರಿಂದಲೂ ಮುಕ್ತ ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದೆ. 2007ರಿಂದ ಸತತವಾಗಿ ಧರಣಿ ಮತ್ತು ಸತ್ಯಾಗ್ರಹಗಳ ಮುಂಚೂಣಿಯಲ್ಲಿರುವ ತವಕ್ಕಲ್ ಕರ್ಮಾನ್, ಸ್ವತಂತ್ರ ಟೀವಿ ಮತ್ತು ಪತ್ರಿಕೆಯೊಂದನ್ನು ಆರಂಭಿಸಲು ಅನುಮತಿಗಾಗಿ ಸರಕಾರದ ಜತೆಗೆ ನಡೆಸುತ್ತಿರುವ ಸೆಣಸಾಟಕ್ಕೆ ಇನ್ನೂ ತಾರ್ಕಿಕ ಅಂತ್ಯ ಲಭಿಸಿಲ್ಲ. ಈ ಸುಧಾರಣಾವಾದಿ ಮಹಿಳೆ ನಿರ್ಭೀತ ಪತ್ರಕರ್ತೆ. ಚಳವಳಿ ನಡೆಸಿದ ಈಕೆಯನ್ನು ವರ್ಷದ ಆರಂಭದಲ್ಲಿ ಜೈಲಿಗಟ್ಟಿದ ಸರಕಾರ, ಸಾರ್ವಜನಿಕ ಒತ್ತಡಕ್ಕೆ ಮಣಿದು ಶೀಘ್ರವೇ ಬಿಡುಗಡೆ ಮಾಡಿತು.

ಯೆಮನ್‌ನ ಪ್ರಮುಖ ಪ್ರತಿಪಕ್ಷವಾದ ಅಲ್ ಇಸ್ಲಾಹ್‌ನ ಹಿರಿಯ ನಾಯಕಿ ಈಕೆ. ಕಳೆದ ಸಲದ ಚುನಾವಣೆಯಲ್ಲಿ ಈಕೆಯ ಪಕ್ಷ ಶೇಕಡಾ 22ರಷ್ಟು ಮತ ಪಡೆದು, ಪಾರ್ಲಿಮೆಂಟಿನ 301 ಸ್ಥಾನಗಳಲ್ಲಿ 46 ಸ್ಥಾನಗಳನ್ನು ಗೆದ್ದು ಜಗತ್ತಿನ ಗಮನ ಸೆಳೆಯಿತು. ಕೊಲ್ಲಿ ರಾಷ್ಟ್ರಗಳೆಲ್ಲವೂ ಮಹಿಳೆಯರ ಹಕ್ಕುಗಳತ್ತ ಈಗಷ್ಟೇ ಕಣ್ಣು ಬಿಡುತ್ತಿವೆ. ಯೆಮನ್‌ನಲ್ಲಿ ನಡೆಯುತ್ತಿರುವ ಹೋರಾಟ ಇತರ ರಾಷ್ಟ್ರಗಳ ಮಹಿಳೆಯರಲ್ಲೂ ಆತ್ಮವಿಶ್ವಾಸ ತುಂಬುತ್ತಿದೆ. ರಾಜಕೀಯ ಹೋರಾಟವನ್ನೇ ಬದುಕಾಗಿಸಿಕೊಂಡಿರುವ ಈ ಮೂರು ಮಕ್ಕಳ ತಾಯಿಗೆ ಪ್ರತಿಷ್ಠಿತ ನೋಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿರುವುದು ಅರ್ಹವಾಗಿಯೇ ಇದೆ.

## ಶಾಬ್ಬಾಸ್ ಸಲೀಂ ಕುಮಾರ್!



ಮಲಯಾಳಂ ನಟರಿಗೆ 'ಶ್ರೇಷ್ಠ ನಟ' ರಾಷ್ಟ್ರೀಯ ಪ್ರಶಸ್ತಿ ಹೊಸತೇನಲ್ಲ. ಭರತ್ ಗೋಪಿ, ಬಾಲನ್ ಕೆ ನಾಯರ್, ಸುರೇಶ್ ಗೋಪಿ, ಮಮ್ಮುಟ್ಟಿ, ಮೋಹನ್ ಲಾಲ್ ಮುಂತಾದವರೆಲ್ಲ ಈಗಾಗಲೆ ರಾಷ್ಟ್ರೀಯ ಮಟ್ಟದಲ್ಲಿ ಶ್ರೇಷ್ಠ ನಟ ಪ್ರಶಸ್ತಿ ಗೆದ್ದವರೇ. ಅದರಲ್ಲೂ ಮಮ್ಮುಟ್ಟಿ ಮೂರು ಸಲ ಗೆದ್ದರೆ, ಮೋಹನ್‌ಲಾಲ್ ಎರಡು ಸಲ ಗೆದ್ದು ಮಲಯಾಳಂ ಚಿತ್ರರಂಗಕ್ಕೆ ಕೋಡು ಮೂಡಿಸಿದ್ದಾರೆ. ಆದರೆ ಈ ಸಲ ಸಲೀಂ ಕುಮಾರ್ ಗೆದ್ದಿರುವ 'ಅತ್ಯುತ್ತಮ ನಟ' ರಾಷ್ಟ್ರೀಯ ಪ್ರಶಸ್ತಿ ಮಾತ್ರ ವಿಶಿಷ್ಟ-ವಾದದ್ದು. ಈವರೆಗೆ ಗೆದ್ದವರೆಲ್ಲ ಗಂಭೀರ ನಟನೆಗೆ ಹೆಸರುವಾಸಿಯಾದವರು. ಆದರೆ ಸಲೀಂ ಕುಮಾರ್ ಮೂಲತಃ ಮಿಮಿಕ್ರಿ ಪಟು ಮತ್ತು ಹಾಸ್ಯನಟ. ಕಾಲೇಜು ದಿನ-ಗಳಿಂದಲೂ ಮಿಮಿಕ್ರಿಗಾಗಿ ಪ್ರಶಸ್ತಿ ಪಡೆಯುತ್ತಿದ್ದ ಈತ ಈ ವರ್ಷ (2010ರ ಸಾಲಿಗೆ) 'ಆದಮಿಂಡೆ ಮಗನ್ ಅಬು' ಚಿತ್ರದ ನಟನೆಗಾಗಿ ರಾಷ್ಟ್ರೀಯ, ರಾಜ್ಯ ಮಟ್ಟದ ಶ್ರೇಷ್ಠ ನಟ ಪ್ರಶಸ್ತಿ ಪಡೆದಿದ್ದಾರೆ. ಜತೆಗೆ ಈ ಚಿತ್ರ ಆಸ್ಕರ್ ಪ್ರಶಸ್ತಿಯ ವಿದೇಶಿ ವಿಭಾಗದಲ್ಲಿ ಭಾರತದ ಎಂಟ್ರಿಗೆ ಆಯ್ಕೆಯಾಗಿರುವುದೂ ಸಲೀಂ ಕುಮಾರ್ ಹೆಮ್ಮೆಯನ್ನು ಹೆಮ್ಮರವಾಗಿಸಿದೆ. ರಜನಿಕಾಂತ್, ಅಮೀರ್‌ಖಾನ್ ಮುಂತಾದವರ ಚಿತ್ರಗಳನ್ನೂ ಹಿಮ್ಮೆಟ್ಟಿಸಿ 'ಆದಮಿಂಡೆ ಮಗನ್...' ಆಸ್ಕರ್ ಪೈಪೋಟಿಗೆ ಆಯ್ಕೆಯಾಗಿರುವುದು ವಿಶೇಷವೇ. ಸಲೀಂ ಅಹ್ಮದ್ ಎಂಬ ಯುವ ನಿರ್ದೇಶಕನ ಚೊಚ್ಚಲ ಚಿತ್ರವಿದು. ಆತನೇ ಚಿತ್ರದ ಸಹನಿರ್ಮಾಪಕ. 30 ದಿನಗಳಷ್ಟೇ ಶೂಟಿಂಗ್ ಮಾಡಿ ಡಿಜಿಟಲ್‌ನಲ್ಲಿ ನಿರ್ಮಿಸಿದ ಈ ಚಿತ್ರಕ್ಕೆ ವಿತರಕರೂ ಸಿಗದೆ, ಸ್ವತಃ ಸಲೀಂ ಕುಮಾರ್ ಚಿತ್ರದ ವಿತರಕರಾದರು. ಅವರದ್ದೂ ಚೊಚ್ಚಲ ವಿತರಣೆ! ಈಗ ಈ 'ಸಲೀಂ ಜೋಡಿ'ಯತ್ತ ಭಾರತೀಯರೆಲ್ಲರ ಹೆಮ್ಮೆಯ ಕಣ್ಣು ನೆಟ್ಟಿದೆ.

ಎರ್ನಾಕುಲಂ ಜಿಲ್ಲೆಯ ನಾರ್ಥ್ ಪರವೂರಿನ ನಿವಾಸಿ, 43ರ ಹರೆಯದ ಸಲೀಂ ಕುಮಾರ್ (ಬರ್ತ್‌ಡೇ 10–6–68) ಬಿ.ಎ ಪದವೀಧರ. ಯೂನಿವರ್ಸಿಟಿ ಮಟ್ಟ-ದಲ್ಲಿ ಮಿಮಿಕ್ರಿಗಾಗಿ ಪ್ರಶಸ್ತಿ ಗೆಲ್ಲುತ್ತಾ ಕೊಚ್ಚಿನ್ ಕಲಾಭವನ್ ಮತ್ತು ಕೊಚ್ಚಿನ್ ಸಾಗರ್ ಸಂಸ್ಥೆಗಳಲ್ಲಿ ಹೆಚ್ಚಿನ ಅನುಭವ ಪಡೆದಾತ. 'ಕಾಮಿಕೋಳ' ಎಂಬ ಟೀವಿ ಹಾಸ್ಯ ಧಾರವಾಹಿ ಹಿಟ್ ಆದದ್ದೇ ಸಲೀಂ ಕುಮಾರ್‌ಗೆ ಜನಪ್ರಿಯತೆ ಬಂತು. 'ಇಷ್ಟಮಾನ್ ನೂರು ವಟ್ಟಂ' ಎಂಬ ಸಿನಿಮಾದಲ್ಲಿ ಮೊದಲ ಪಾತ್ರ ಹಾಸ್ಯ ನಟನೆಗೆ ಮೂಲವಾಯಿತು. ಅಲ್ಲಿಂದೀಚೆಗೆ ಹಾಸ್ಯನಟನಾಗಿ ಮಲಯಾಳಂ ಚಿತ್ರರಂಗಕ್ಕೆ ಅನಿವಾರ್ಯರಾದ ಸಲೀಂ ಕುಮಾರ್, ನಟಿಸಿರುವ ಸಿನಿಮಾಗಳ ಒಟ್ಟು ಸಂಖ್ಯೆ ಈಗ 116 ದಾಟಿದೆ. 90ರ ದಶಕದಲ್ಲಿ ಒಂದು ಮಿಮಿಕ್ರಿ ಷೋಗೆ 250 ರೂಪಾಯಿ ಸಂಭಾವನೆ ಪಡೆಯುತ್ತಿದ್ದ, ಒಂದು ಜತೆ ಶರ್ಟ್ ಮಾತ್ರ ಇಟ್ಟುಕೊಂಡು ಸಿನಿಮಾ-ದಲ್ಲಿ ಛಾನ್ಸ್‌ಗಾಗಿ ಓಡಾಡುತ್ತಿದ್ದ ಈತ, ಈಗ ನಟನೆಯಲ್ಲಿ ಎಲ್ಲರನ್ನೂ ಹಿಂದಿಕ್ಕಿ ಜಾಗತಿಕ ಮಟ್ಟಕ್ಕೆ ಲಂಘನ ಮಾಡಿರುವುದು ಶ್ರಮಕ್ಕೆ ತಕ್ಕ ಫಲವೇ ಸರಿ. ಈ ಹಿಂದೊಮ್ಮೆ 'ಅಚ್ಚನುರಂಗತ್ತೆ ವೀಡ್' ಚಿತ್ರದಲ್ಲಿ ಈತ ನಾಯಕ ನಟನಾಗಿ ನಟಿಸಿದ್ದು, ಅದಕ್ಕೆ ರಾಜ್ಯ ಮಟ್ಟದಲ್ಲಿ ಎರಡನೆ ಅತ್ಯುತ್ತಮ ನಟ ಪ್ರಶಸ್ತಿ ಲಭಿಸಿತ್ತು. ರಾಜಕೀಯವಾಗಿ ಯುಡಿಎಫ್ (ಕೆ.ಕರುಣಾಕರಣ್) ಬಣದ ಕಟ್ಟಾ ಬೆಂಬಲಿಗ-ನಾಗಿರುವ ಸಲೀಂ ಕುಮಾರ್‌ಗೆ ಈಗ ಸುದ್ದಿ ಮಾಧ್ಯಮಗಳಲ್ಲಿ ಎಲ್ಲಿಲ್ಲದ ಪ್ರಚಾರ ಸಿಗುತ್ತಿದೆ. ಆದರೆ ಆತ ಮಾತ್ರ 'ಆದಮಿಂಡೆ ಮಗನ್...' ಸಿನಿಮಾವನ್ನು ಅಮೆರಿಕದಲ್ಲಿ ಬಿಡುಗಡೆ ಮಾಡಲು ಹಣವಿಲ್ಲದೆ ಒದ್ದಾಡುತ್ತಿದ್ದಾನೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65